ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

1) ಹೌದು. ಸರ್ಕಾರ ದಿನಾಂಕ 8.3.99ರ ಆದೇಶದಲ್ಲಿ, ಸಂಸ್ಥೆಯೊಂದಿಗೆ ನೀರಿನ ಶುಲ್ಕ ಮತ್ತು ಇತರೆ ಹಣಕಾಸಿನ ವಿಷಯಗಳಲ್ಲಿ ಸಮಾಲೋಚಿಸಿ ಯಾವುದೇ ಒಪ್ಪಂದವನ್ನು ಸಂಸ್ಥೆಯೊಂದಿಗೆ ಮಾಡಿಕೊಳ್ಳುವ ಮುನ್ನ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕೆಂದು ಸರ್ಕಾರವು ಬೆಂಗಳೂರು ಜಲ ಮಂಡಳಿಗೆ ನಿರ್ದೇಶಿಸಿರುತ್ತದೆ.

ಅ) ಈ ಯೋಜನೆಯನ್ನು 'ಬೂಟ್' ಆಧಾರದ ಮೇಲೆ ಕಾರ್ಯಗತಗೊಳಿಸಲು ಉತ್ಸುಕರಾಗಿರುವ ಟೆಂಡರ್‌ದಾರರನ್ನು ಗುರ್ತಿಸಲು ಆಹ್ವಾನ ನೀಡಿತ್ತು. ಒಟ್ಟು 12 ಸಂಸ್ಥೆಗಳು ತಮ್ಮ ಇಚ್ಛೆಯನ್ನು ಸೂಚಿಸಿ ವಿವರಗಳನ್ನು ನೀಡಿದವು. ಟೆಂಡರ್‌ನಲ್ಲಿ ಪ್ರಕಟಿಸಿದ್ದ ಪೂರ್ವ ಅರ್ಹತಾ ಆಧಾರದ ಮೇಲೆ 8 ಸಂಸ್ಥೆಗಳನ್ನು ಅಂತಿಮ ಪಟ್ಟಿಯಲ್ಲಿ ಸೇರಿಸಲಾಯಿತುಯ ಟೆಂಡರ್‌ಗಳನ್ನು 7 ಸಂಸ್ಥೆಗಳು ಮಾತ್ರ ಖರೀದಿಸಿದವು ಹಾಗೂ ಕೇವಲ 3 ಸಂಸ್ಥೆಗಳು ಮಾತ್ರ ತಮ್ಮ ಟೆಂಡರ್‌ಗಳನ್ನು ಸಲ್ಲಿಸಿದವು. ಸಲ್ಲಿಸಿದ ಟೆಂಡರ್‌ಗಳನ್ನು ಅವರುಗಳು ಬೂಟ್ ಬಾಟ ಆಧಾರದ ಮೇಲೆ ಕೈಗೊಂಡಿರುವ ಯೋಜನೆಗಳು, ತಾಂತ್ರಿಕ ಚಾಲನ ಮತ್ತು ನಿರ್ವಾಹಣಾ ಸಾಮರ್ಥ್ಯ, ಹಾಗೂ ಹಣಕಾಸು ಹೊಂದಿಸುವಿಕೆ, ನೀರಿನ ದರಗಳ ಆದಾರದ ಮೇಲೆ ಬೆಂಗಳೂರು ಜಲ ಮಂಡಳಿಯು ವಿಶ್ಲೇಷಿಸಿ, ಸರ್ಕಾರಕ್ಕೆ ವಿವರಗಳನ್ನು ಸಲ್ಲಿಸಿತು. ವಿಶ್ಲೇಷಣೆಯ ಆಧಾರದ ಮೇಲೆ ಬೈವಾಟರ್ ಸಂಸ್ಥೆಯು ಅತಿ ಗರಿಷ್ಠ ಅಂಕ ಪಡೆದ ಬಿಡ್ಡರ್ ಎಂದು ಪರಿಗಣಿಸಲಾಗಿದೆ.

ಅನಧಿಕೃತ ಮನೆ ನಿರ್ಮಿಸಿರುವ ನಿವಾಸಿಗಳಿಗೆ ವಿದ್ಯುತ್ ಅಳವಡಿಸಿಕೊಡುವುದು.

984(933) ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :— ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಪ್ರದೇಶದಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿರುವ ನಿವಾಸಿಗಳಿಂದ ವಿದ್ಯುತ್ ಅಳವಡಿಸಿ ಕೊಡುವ ಬಗ್ಗೆ ಸರ್ಕಾರಕ್ಕೆ ಬೇಡಿಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.